**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 348/2014**

**ಸಾಕ್ಷಿಗೆ ದಿನಾಂಕ 19.2.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಜಯಕುಮಾರ್ | ಪಿ.ಡಬ್ಲ್ಯೂ-5 |
| ತಂದೆಯ/ಗಂಡನ ಹೆಸರು | : | ಎನ್.ಕಾಳ | ಸಿ.ಡಬ್ಲ್ಯೂ-15 |
| ವಯಸ್ಸು | : | 49 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಬಸವನಗಿರಿ ಹಾಡಿ-ಬಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2010 ರಿಂದ 2015 ಲ್ಯಾಂಪ್ಸ್ ಸೊಸೈಟಿ, ಹೆಚ್.ಡಿ.ಕೋಟೆ ಇಲ್ಲಿ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 4.11.2011 ರಂದು ನಮ್ಮ ಸೊಸೈಟಿಯಲ್ಲಿ ಹಣ ದುರುಪಯೋಗವಾಗಿರುವ ವಿಚಾರವಾಗಿ ಹೆಚ್.ಡಿ.ಕೋಟೆ ಪೋಲಿಸ್ ಠಾಣೆಯ ತನಿಖಾಧಿಕಾರಿಯವರು ಲ್ಯಾಂಪ್ಸ್ ಸೊಸೈಟಿಗೆ ಭೇಟಿ ನೀಡಿ ಚಾಸ 18 ರವರು ತೋರಿಸಿದ ಕೃತ್ಯ ನಡೆದ ಸ್ಥಳವನ್ನು ನನ್ನ ಹಾಗೂ ಚಾಸ 14 ರವರ ಸಮಕ್ಷಮ ಪರಿಶೀಲಿಸಿ ಬೆಳಿಗ್ಗೆ 11 ರಿಂದ 11.45 ರವರೆಗೆ ಸ್ಥಳ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಸದರಿ ಮೂಲ ಪ್ರತಿ ಸಿ.ಸಿ 344/2014 ರಲ್ಲಿ ಹಾಜರುಪಡಿಸಿದ್ದು ಅದರ ಯಥಾಪ್ರತಿಯನ್ನು ಈಗಾಗಲೇ ನಿಪಿ4 ಎಂದು ಗುರುತಿಸಲಾಗಿರುತ್ತದೆ.

ದಿನಾಂಕ 8.3.2013 ರಂದು ಈ ಪ್ರಕರಣದ ಪೋಲಿಸ್ ತನಿಖಾಧಿಕಾರಿಯವರು ಲ್ಯಾಂಪ್ಸ್ ಸೊಸೈಟಿಗೆ ಭೇಟಿ ನೀಡಿ 2001 ರಿಂದ 2007 ನೇ ಸಾಲಿಗೆ ಸಂಬಂಧಪಟ್ಟ ಕ್ಯಾಶ್ ಬುಕ್, ಸ್ಟಾಕ್ ಬುಕ್, ನಡವಳಿ ಪುಸ್ತಕ, ವಾರ್ಷಿಕ ಮಹಾಸಭೆಯ ನಡಾವಳಿ ಪುಸ್ತಕ, ವಿಚಾರಣಾ ವರದಿ, ಆಡಿಟ್ ವರದಿಯನ್ನು ಹಾಜರುಪಡಿಸುವಂತೆ ಚಾಸ 14 ರವರ ಬಳಿ ಕೇಳಿದ್ದು, ಚಾಸ 14 ರವರು ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದು ಸದರಿ ಸಮಯದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಚಾಸ 20 ರವರು ಹಾಜರಿದ್ದು ಹಾಗೂ ಪಂಚರಾದ ನನ್ನ ಮತ್ತು ಚಾಸ 16 ರವರ ಸಮಕ್ಷಮ ಸದರಿ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವೆರೆಗೆ ಮಹಜರನ್ನು ಮಾಡಿರುತ್ತಾರೆ.

ಸಾಕ್ಷಿದಾರರು ಸದರಿ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಸದರಿ ಮೂಲ ಪ್ರತಿ ಸಿ.ಸಿ 344/2014 ರಲ್ಲಿ ಹಾಜರುಪಡಿಸಿದ್ದು ಅದರಿ ಯಥಾಪ್ರತಿಯನ್ನು ಈಗಾಗಲೇ ನಿಪಿ5 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿದಾರರು ಸದರಿ ದಿನ ಅಮಾನತ್ತುಪಡಿಸಿಕೊಂಡಿರುವ ವಿಚಾರಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ6 ಎಂದು, 2001-02, 2002-03, 2003-04, 2005-06 ರಿಂದ 2009-10 ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ಈಗಾಗಲೇ ನಿಪಿ7 ರಿಂದ ನಿಪಿ10 ಎಂದು, ದಾಸ್ತಾನು ಪುಸ್ತಕವನ್ನು ಈಗಾಗಲೇ ನಿಪಿ11 ಎಂದು, 2001-02, 2002-03, 2003-04, 2004-05, 2005 ರಿಂದ 2007 ನೇ ಸಾಲಿನ ನಗದು ಪುಸ್ತಕಗಳನ್ನು ಈಗಾಗಲೇ ನಿಪಿ12 ರಿಂದ ನಿಪಿ16 ಎಂದು, 2006-07 ನೇ ಸಾಲಿನ ಠರಾವು ಪುಸ್ತಕವನ್ನು ಈಗಾಗಲೇ ನಿಪಿ17 ಎಂದು, ವಾರ್ಷಿಕ ಮಹಾಸಭೆಯ ಪುಸ್ತಕವನ್ನು ಈಗಾಗಲೇ ನಿಪಿ18 ಎಂದು ಸಿ.ಸಿ 344/2014 ರಲ್ಲಿ ಗುರುತಿಸಲಾಗಿರುತ್ತದೆ. ದಿನಾಂಕ 4.10.1996 ರಿಂದ 24.12.2006 ರವರೆಗಿನ ಠರಾವು ಪುಸ್ತಕವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ**

ಪೋಲಿಸರು ಮಹಜರು ಮಾಡುವ ಬಗ್ಗೆ ನೋಟಿಸನ್ನು ನೀಡಿದ್ದರು. ಸದರಿ ನೋಟಿಸ್ ನನ್ನ ಬಳಿ ಇರುವುದಿಲ್ಲ. ಸದರಿ ದಿನ ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ, ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನಿಪಿ4 ರಂತೆ ಮಹಜರನ್ನು ಮಾಡಿದಾಗ ಸದರಿ ಸೊಸೈಟಿ ಅಸ್ತಿತ್ವದಲ್ಲಿದ್ದ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ಚಾಸ 18 ರವರು ಮೈಸೂರಿನವರಾಗಿದ್ದು ಅವರ ಹುದ್ದೆ ನನಗೆ ಗೊತ್ತಿರುವುದಿಲ್ಲ. ಚಾಸ 18 ರವರು ಲ್ಯಾಂಪ್ಸ ಸೊಸೈಟಿಯಲ್ಲಿ 2011 ರಲ್ಲಿ ಕಾರ್ಯದರ್ಶಿ ಆಗಿದ್ದರು. ಪೋಲಿಸರು ನಿಪಿ4 ಮಹಜರನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ4 ಮಹಜರು ಮಾಡಿದ ಒಂದುವರೆ ವರ್ಷದ ನಂತರ ನಿಪಿ4 ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿ. ನಿಪಿ5 ರಂತೆ ಮಹಜರು ಮಾಡಿದ ಸಮಯದಲ್ಲಿ ಸಹ ಪೋಲಿಸರು ನನಗೆ ನೋಟಿಸನ್ನು ನೀಡಿದ್ದರು. ಸದರಿ ದಿನ ಪೋಲಿಸರು 4 ರಿಜಿಸ್ಟರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ5 ಮಹಜರನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅಮಾನತ್ತುಪಡಿಸಿಕೊಂಡ ರಿಜಿಸ್ಟರುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಿನ ಪೋಲಿಸರು ನಮ್ಮ ಸೊಸೈಟಿಗೆ ಬಂದು ರಿಜಿಸ್ಟರುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ನಿಪಿ5 ಮಹಜರನ್ನು ಈ ಕೇಸಿಗೋಸ್ಕರ ಠಾಣೆಯಲ್ಲಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ